
# ಮೀನಿನ ಬಾಯಾರಿಕೆ

ಎಸ್. ಮಧುಸೂದನ್

*ಒಂದು ಸುಂದರ ರೂಪಕದ ಮೂಲಕ ಅದ್ವೈತ ತತ್ತ್ವವನ್ನು ಪ್ರತಿಪಾದಿಸಿರುವ ಶ್ರೀ ಮಧುಸೂದನ್ ಅವರು ಪ್ರಸ್ತುತ ಸಿಂಗಪುರದಲ್ಲಿ ಕೆಲಸ ಮಾಡುತ್ತಿರುವರು.*

ಒಂದು ಕೊಳದಲ್ಲಿ ಮೀನುಗಳ ವಾಸ. ಸ್ವಚ್ಛವಾದ ಆ ಕೊಳದಲ್ಲಿ ಹಲವಾರು ತರಹದ ಮೀನುಗಳು. ಅವುಗಳಿಗೆ ಯಾವ ರೀತಿಯ ತೊಂದರೆಯೂ ಇಲ್ಲ. ಹೀಗಿರುವಾಗ ಒಂದು ಮೀನಿಗೆ ಯಾವುದೋ ಒಂದು ರೀತಿಯ ಹಿಂಸೆ. ಸದಾ ನೀರನ್ನು ಕುಡಿಯುವ ಬಯಕೆ. ಎಷ್ಟು ಕುಡಿದರೂ ತೀರದ ಬಾಯಾರಿಕೆ. ಅದು ಎಲ್ಲರ ಬಳಿ ಸಾರಿ ತನ್ನ ಕಷ್ಟವನ್ನು ಹೇಳಿಕೊಳ್ಳುವುದು. ಎಲ್ಲ ಮೀನುಗಳೂ ನಗುವುವು. ಇದು ದಿನೇ ದಿನೇ ಹೆಚ್ಚಾಗುತ್ತಾ ಹೋಯಿತು. ಈ ಮೀನಿನ ಬಾಯರಿಕೆಯ ಹಿಂದಿರುವ ಗುಪ್ತ ವಾದ ವಿಚಾರವಾದರೂ ಏನು? ಇದು ಸತ್ಯವೇ? ಎಲ್ಲಾದರೂ ಮೀನಿಗೆ ಬಾಯಾರಿಕೆ ಉಂಟಾಗುವುದೇ? ಇದನ್ನು ಆ ಮೀನಿನ ಬಳಿಯೇ ಕೇಳೋಣ.

ಆ ಮೀನು ಹೀಗೆ ಎಲ್ಲರ ಬಳಿ ಸಾರುತ್ತ ಒಮ್ಮೆ ಒಂದು ವೃದ್ಧ ಮೀನಿನ ಬಳಿ ಬಂದಿತು. ಇದರ ಇಂಗದ ಬಾಯಾರಿಕೆಯ ಬಗ್ಗೆ ಕೇಳಿದ ಆ ವೃದ್ಧ ಮೀನು ಸ್ವಲ್ಪ ಮೌನ ತಾಳಿ ನಂತರ ಹೀಗೆ ಹೇಳಿತು, "ನೀನೇ ಧನ್ಯ! ಈ ಬಾಯಾರಿಕೆ ಎಲ್ಲರಿಗೂ ಆದಾಗ ಎಷ್ಟು ಚೆನ್ನಾಗಿರುತ್ತೆ. ನಿನ್ನ ಈ ತೀರದ ಬಾಯಾರಿಕೆ ನನಗೆ ಸತ್ಯವಾಗಿ ತೋರುತ್ತಿದೆ, ಏಕೆಂದರೆ ಈ ಬಾಯಾರಿಕೆಯನ್ನು ಅನುಭವಿಸಿದವನು ನಾನು" ಎಂದು. ಆಶ್ಚರ್ಯದಿಂದ ಈ ಬಾಯಾರಿದ ಮೀನು ಕೇಳಿತು, "ಹಾಗಾದರೆ ಈಗ ಬಾಯಾರಿಕೆ ಇಲ್ಲವೇ?" ಎಂದು. ಅದಕ್ಕೆ ಆ ವೃದ್ಧ ಮೀನು ನಗುತ್ತಾ "ಇಲ್ಲ" ಎಂದು ತಲೆಯಾಡಿಸಿ, "ಈಗ ನಾನು ಮೀನಲ್ಲ. ಆದ್ದರಿಂದ ನನಗೆ ಬಾಯಾರಿಕೆ ಎಂಬುದಿಲ್ಲ" ಎಂದಿತು. ಈ ಬಾಯಾರಿದ ಮೀನಿಗೆ ತನ್ನ ಬಾಯಾರಿಕೆಯಿಂದಾದ ಕಷ್ಟಕ್ಕಿಂತಲೂ ಈ ವೃದ್ಧ ಮೀನಿನ ಮಾತಿನಿಂದ ಹೆಚ್ಚು ಆಶ್ಚರ್ಯವಾಯಿತು.



ಕಲೆ : ಬ್ರ. ನಾರಾಯಣ

ಈಗ ಆ ವೃದ್ಧಮೀನು ಕೆಲವು ಪ್ರಶ್ನೆಗಳನ್ನು ಬಾಯಾರಿದ ಮೀನಿಗೆ ಹಾಕಿತು. "ನಿನಗೆ ಎಂದಿನಿಂದ ಬಾಯಾರಿಕೆ ಇದೆ ಯೋಚಿಸಿ ಹೇಳು" ಎಂದು ಕೇಳಿತು. ಅದಕ್ಕೆ ಬಾಯಾರಿದ ಮೀನು ಯೋಚಿಸಿ "ನಾನು ಇಲ್ಲಿ ಕೊಳಕ್ಕೆ ಬಂದಾಗಿನಿಂದ" ಎಂದಿತು. ಈ ಮುಂಚೆ ಈ ಮೀನು ಸರೋವರ ಒಂದರಲ್ಲಿ ಇದ್ದಿರಬೇಕು ಎಂದು ತಿಳಿದ ವೃದ್ಧಮೀನು ನಸುನಕ್ಕು, "ಆ ನೀರು, ಈ ಕೊಳದ ನೀರು ಎಲ್ಲ ಒಂದೇ ತಾನೇ" ಎಂದಾಗ, "ಆದರೆ ಏನೋ ವ್ಯತ್ಯಾಸ ಇದೆ. ಯಾವುದದು ಎಂದು ಗೊತ್ತಿಲ್ಲ" ಎಂದಿತು ಬಾಯಾರಿದ ಮೀನು. ಆಗ ಆ ವೃದ್ಧಮೀನು ಗಂಭೀರ ಧ್ವನಿಯಲ್ಲಿ ಹೇಳಿತು: "ಮಗು! ಎಚ್ಚರ! ಯಾವಾಗ ಈ ವ್ಯತ್ಯಾಸ ಎಂಬುದು ಮನಸ್ಸಿಗೆ ಬರುವುದೋ ಅದನ್ನು ಸಮತೆಯ ದೃಷ್ಟಿಯಿಂದ ನೋಡಿ ಪರಿಹರಿಸಬೇಕು" ಎನ್ನುತ್ತಾ ತನಗೂ ಕೊಳದಲ್ಲಿರುವ ಇತರ ಮೀನುಗಳಿಗೂ ಹಾಗೂ ಈ ಬಾಯಾರಿದ ಮೀನಿಗಿರುವ ವ್ಯತ್ಯಾಸವನ್ನು ವಿವರಿಸಿತು. "ಈ ಕೊಳದಲ್ಲಿ ಯಾವ ಮೀನಿಗೂ ನಿನಗೆ ಇರುವ ಬಾಯಾರಿಕೆ ಇಲ್ಲ. ನನಗೆ ಆ ಬಾಯಾರಿಕೆ ಇತ್ತು. ಈಗಿಲ್ಲ. ನಿನಗಿದೆ. ಅಂದರೆ ಯಾವ ವ್ಯತ್ಯಾಸವೂ ತಿಳಿಯದೆ ಇದ್ದಾಗ ಬಾಯಾರಿಕೆ ಇಲ್ಲ, ವ್ಯತ್ಯಾಸವನ್ನು ಸಮತೆಯ ದೃಷ್ಟಿಯಿಂದ ನೋಡಿದಾಗಲೂ ಬಾಯಾರಿಕೆ ಇಲ್ಲ. ಆದರೆ ವ್ಯತ್ಯಾಸದಲ್ಲೇ ಇರುವ, ವ್ಯತ್ಯಾಸವನ್ನು ಕಾಣುತ್ತಿರುವ ನಿನಗೆ ಬಾಯಾರಿಕೆ." ಆಗ ಬಾಯಾರಿದ ಮೀನು "ವ್ಯತ್ಯಾಸವು ತಿಳಿಯದೆ ಇರುವುದು, ಸಮತೆಯ ದೃಷ್ಟಿಯಿಂದಿರುವುದು ಒಂದೇಯೇ?" ಎಂದಾಗ "ಖಂಡಿತಾ ಅದು ಒಂದೇ ಅಲ್ಲ" ಎಂದಿತು ವೃದ್ಧ ಮೀನು. ಮುಂದುವರೆಸುತ್ತಾ "ಇಂದಲ್ಲ ನಾಳೆ ಎಲ್ಲರೂ ಬಾಯಾರಿಕೆಯಿಂದ ಬಳಲಿ ನಿನ್ನ ಹಾಗೆ ವಿಚಾರ ಮಾಡಲೇಬೇಕು" ಎಂದಿತು.

"ನೋಡು ಮಗು, ನಾವೆಲ್ಲರೂ ಒಂದೇ ಸರೋವರದಿಂದ ಬಂದಿರುವವರು. ಎಲ್ಲ ನೀರು ಒಂದೇಯೆ. ಯಾವುದರಲ್ಲೂ ವ್ಯತ್ಯಾಸ ಎಂಬುದಿಲ್ಲ. ಆ ಎಲ್ಲ ದುಗುಡತೆಗಳಿರುವುದು ನಮ್ಮ

ಮನಸ್ಸಿನಲ್ಲಿ. ಈ ಮನಸ್ಸು ಎಷ್ಟು ವಿಚಿತ್ರವೆಂದರೆ ಮೀನಾಗಿರುವ ನಿನಗೆ 'ಬಾಯಾರಿಕೆ' ಎನ್ನುವ ಒಂದು ಭ್ರಾಂತಿಯನ್ನು ಉಂಟುಮಾಡಿದೆ. ಇದು ಸಹಜತನವನ್ನು ಬೇರೆಗೊಳಿಸುವ ಒಂದು ಆಟ. ಯಾವಾಗಲೂ ವ್ಯತ್ಯಾಸವನ್ನು ತೆಗೆದುಹಾಕಿದಾಗ ಬಾಯಾರಿಕೆ ಇರುವುದಿಲ್ಲ. ನನಗೆ ಈ ಬಾಯಾರಿಕೆ ಇತ್ತು. ಆಗ ನನ್ನ ಹಿರಿಯರು ನನಗೆ ಹೇಳಿದ್ದು ಇದೇ ಮಾತು. ಯಾವುದರಲ್ಲೂ 'ನಾನು ಬೇರೆ', ಎಂಬುದು ಮಾತ್ರ ಬರಕೂಡದು ಎಂದು. ಆದರೆ ಮನಸ್ಸಿನಿಂದ ಈ ಭ್ರಾಂತಿಯು ಬರುವುದು. ಬಂದಾಗ ವಿಚಾರಮಾಡಿ ನಿಶ್ಚಯವಾದ ಅಭೇದತತ್ತ್ವವನ್ನು ಮನಗಾಣಬೇಕು. ಈ ಭ್ರಾಂತಿ ಬಾರದೆ ಇದ್ದಾಗ ಮೀನು ಮೀನಾಗಿಯೇ ಇರುವುದು, ಭ್ರಾಂತಿಯಿಂದ ಮೀನು ತಾನು ಯಾರು ಎಂದು ವಿಚಾರಮಾಡಲು ತೊಡಗುವುದು. ಆ ಬಾಯಾರಿಕೆ ಎಂಬ ಭ್ರಾಂತಿ ನೀಗಬೇಕಾದರೆ ವಿಚಾರಮಾಡಿ ಅಮೃತವನ್ನು ಪಾನಮಾಡಬೇಕು. ಅದೇ ರೀತಿಯ ವಿಚಾರ ಮಾಡಿದಾಗ ಗೊತ್ತಾಗಿದ್ದು ನಾನು ಮೀನೇ ಅಲ್ಲ ಎಂದು, ಅದಕ್ಕೆ ನನಗೆ ಬಾಯಾರಿಕೆ ಇಲ್ಲ" ಎಂದಿತು ವೃದ್ಧಮೀನು.

ಇದನ್ನು ಕೇಳಿದ ಆ ಬಾಯಾರಿದ ಮೀನು ಯಾವುದೋ ಒಂದು ಸಂತಸದ, ಹೇಳತೀರದ ಆನಂದವನ್ನು ಅನುಭವಿಸಿತು. ಅದರ "ಬಾಯಾರಿಕೆ" ಹೇಳಹೆಸರಿಲ್ಲದಂತೆ ಮಾಯವಾಗಿತ್ತು. ಅದು ಮತ್ತೆ ಮತ್ತೆ "ನಾನು ಮೀನಲ್ಲ", "ನನಗೆ ಬಾಯಾರಿಕೆ ಇಲ್ಲ" ಎಂದು ಕುಣಿದಾಡಿತು. ಈ ವಿಚಿತ್ರವನ್ನು ನೋಡಿದ ಇತರ ಮೀನುಗಳಿಗೆ ಯಾವುದೂ ಅರ್ಥವಾಗದೆ ಮುಂದೆ ಸಾಗಿದವು.

ನಾವೇ ಈ ಬಾಯಾರಿದ ಮೀನು, ನಮಗೆ ವಿಶೇಷವಾದ ದೈವಕೃಪೆಯಿಂದ ಬಾಯಾರಿಕೆಯಾಗಿದೆ. "ನಾನು ಮೀನು, ಬಾಯಾರಿಕೆ ಭ್ರಾಂತಿ"ಯೆಂದು ತಿಳಿದು ಸುಮ್ಮನಾಗದೆ ಇದಕ್ಕೆ ಕಾರಣವೇನು ಎಂಬುದನ್ನು ಅರಿತವರಿಂದ ಕೇಳಿ ಕಡೆಗೆ ನಾವು "ಮೀನೇ ಅಲ್ಲ" ಎಂಬ ಸತ್ಯವನ್ನು ಮನಗಾಣಬೇಕಾಗಿದೆ. ಇದು ಯಾವ ಭ್ರಾಂತಿ? ಮೀನಿಗೆ ಬಾಯಾರಿಕೆ. ನಮ್ಮೆಲ್ಲರ ಮನಸ್ಸಿನ ಸ್ಥಿತಿಯು ಹಾಗೆಯೇ, ಅಮೃತಮಯವಾದ ಭಗವತ್ಸ್ವರೂಪ ನಮ್ಮಲ್ಲಿದ್ದರೂ ಶುಷ್ಕಮಾಯಾ ಪ್ರಪಂಚದಲ್ಲಿ ಬಾಯಾರಿದ್ದೇವೆ. ಇದು ನಾವು ಮೀನಿನ ಸ್ವರೂಪ ಎಂಬ ದೃಷ್ಟಿಯಿಂದ, ಬಾಯಾರಿದಾಗ ನಾಚಿಕೆ, ಭಯ. ಏಕೆಂದರೆ ಮೀನಾಗಿ, ನೀರಿನಲ್ಲೇ ಇರುವ ನಮಗೆ ಬಾಯಾರಿಕೆಯಾದುದು ಹೇಗೆ? ಈ ಬಾಯಾರಿಕೆ ಇರುವುದಾದರೂ ಎಂದು? ಹೇಗೆ? ಆಗ ಗುರುಗಳ ಹಿತವಚನದಿಂದ ನಮಗೆ ಅರಿಯುವುದು ನಾವು ಮೀನೇ ಅಲ್ಲ ಎಂದು. ಅದನ್ನು ನಾವು ಅರಿತಾಗ ಮಾತ್ರ ಬಾಯಾರಿಕೆ ಇರುವುದಿಲ್ಲ. ಏಕೆಂದರೆ ವಿಷಯ ತಿಳಿದವರು ಮೀನಿಗೆ ಬಾಯಾರಿಕೆ ಎಂಬುದಿಲ್ಲ ಎನ್ನುತ್ತಾರೆ. ಜ್ಞಾನಿಗಳು ಮೀನೇ ಇಲ್ಲ ಎನ್ನುತ್ತಾರೆ, ಅದರಿಂದ ಜ್ಞಾನಮಾರ್ಗಾವಲಂಬನದಿಂದ ನಾವು ಮೀನು ಅಲ್ಲ, ನಮಗೆ ಬಾಯಾರಿಕೆಯಿಲ್ಲ ಎಂದು ಅರಿಯಬಹುದು. ☆

# ಪ್ರಹಸನ ಪ್ರಸಂಗ

ವಿಧವೆಯೊಬ್ಬಳು ಮೃತ ಪತಿ ಹೇಗಿದ್ದಾನೆ ಎಂದು ತಿಳಿಯ ಬಯಸಿದಳು. ಆಕೆ ಒಂದು ಮಾಧ್ಯಮದ ಸಹಾಯದಿಂದ ತನ್ನ ಪತಿಯನ್ನು ಸಂಪರ್ಕಿಸಿ ಕೇಳಿದಳು: "ಸ್ವಾಮಿ, ನೀವು ಈಗ ಸುಖವಾಗಿದ್ದೀರಾ?" "ತುಂಬ ಸುಖವಾಗಿದ್ದೇನೆ"—ಪತಿ ಉತ್ತರಿಸಿದ.

"ನೀವು ಭೂಮಿಯಲ್ಲಿ ನನ್ನೊಡನೆ ಇದ್ದಾಗಿಂತಲೂ ಹೆಚ್ಚು ಸುಖವಾಗಿದ್ದೀರಾ?" "ಹೌದು, ನಾನು ಭೂಮಿಯಲ್ಲಿ ನಿನ್ನೊಡನೆ ಇದ್ದಾಗಿಂತಲೂ ತುಂಬ ತುಂಬ ಸುಖವಾಗಿದ್ದೇನೆ" "ಹಾಗಾದರೆ ಸ್ವರ್ಗ ಹೇಗಿರುತ್ತದೆ ಸ್ವಲ್ಪ ಹೇಳುತ್ತೀರಾ?" ವಿಧವೆ ಕೇಳಿದಳು.

"ಸ್ವರ್ಗ ಎಲ್ಲಿಂದ ಬಂತು! ನಾನಿರುವುದು ನರಕದಲ್ಲಿ"—ಪತಿ ಹೇಳಿದ. ಅವನ ಪಾಲಿಗೆ ನರಕವಾಸವೇ ಪತ್ನಿಯೊಡನಿರುವುದಕ್ಕಿಂತ ಬಹುಪಾಲು ಸುಖಕರವಾಗಿತ್ತು.

ಸುಖ ಎಂಬುದು ಸಾಪೇಕ್ಷವಾದುದು. ಅದು ನಮ್ಮ ಮನೋಭಾವವನ್ನು ಅವಲಂಬಿಸಿರುತ್ತದೆ. ನಾವು ಸುಖಿಯಾಗಿರಬೇಕೆಂದು ಇಷ್ಟಪಟ್ಟರೆ ನರಕದಲ್ಲಿಯೂ ಸುಖವಾಗಿರಬಹುದು, ಇಲ್ಲದಿದ್ದರೆ ಸ್ವರ್ಗವೂ ನರಕವಾಗಬಹುದು.

ನಮಗೆ ನಾವೇ ಧೈರ್ಯ ತಂದುಕೊಳ್ಳಬೇಕು. ಈ ಪ್ರಪಂಚದಲ್ಲಿ ಎಲ್ಲರೂ ಒಂದಲ್ಲ ಒಂದು ಭಯದಿಂದ ಕೂಡಿರುತ್ತಾರೆ. ಅವರಿಂದ ಭರವಸೆಯನ್ನು ಬಯಸುವುದೆಂದರೆ ನಮ್ಮ ಭಯವನ್ನು ಇನ್ನೂ ಹೆಚ್ಚಿಸಿಕೊಂಡಂತೆ.

ಒಬ್ಬನು ಪರ್ವತಪ್ರದೇಶದಲ್ಲಿ ಲಾರಿಯನ್ನು ಓಡಿಸಿಕೊಂಡು ಹೋಗುತ್ತಿದ್ದ. ರಸ್ತೆ ತುಂಬ ಕಿರಿದಾಗಿತ್ತು. ನಡೆಸುವುದರಲ್ಲಿ ಸ್ವಲ್ಪ ಹೆಚ್ಚುಕಡಮೆಯಾದರೂ ಲಾರಿ ಪ್ರಪಾತಕ್ಕೆ ಬೀಳುವ ಸಂಭವವಿತ್ತು. ಆದರೂ ಡ್ರೈವರನು ವೇಗವಾಗಿಯೇ ಚಲಿಸುತ್ತಿದ್ದ.

ಅವನ ಪಕ್ಕದಲ್ಲಿ ಒಬ್ಬ ಪ್ರಯಾಣಿಕನು ಕುಳಿತಿದ್ದ. ಅವನಿಗೆ ಎಲ್ಲಿಲ್ಲದ ಭಯ, ಏನು ಅನಾಹುತವಾಗುವುದೊ ಎಂಬ ದಿಗಿಲು. ಅವನು ಗಟ್ಟಿಯಾಗಿ ತನ್ನ ಸೀಟನ್ನು ಹಿಡಿದುಕೊಂಡಿದ್ದ. ಅವನಿಗೆ ಧೈರ್ಯ ತುಂಬಲು ಡ್ರೈವರ್ ಹೇಳಿದ: "ಏನೂ ಚಿಂತಿಸಬೇಡ. ನಾನು ವೇಗವಾಗಿ ಓಡಿಸಿದರೂ ಅಪಾಯವೇನೂ ಇಲ್ಲ. ನೀನೇನೂ ಭಯಪಡಬೇಕಾಗಿಲ್ಲ." ಈ ಭರವಸೆ ಆ ಪ್ರಯಾಣಿಕನ ಮೇಲೆ ಹೆಚ್ಚು ಪರಿಣಾಮವನ್ನು ಉಂಟುಮಾಡಲಿಲ್ಲ. ಡ್ರೈವರ್ ಮತ್ತೆ ಅವನಿಗೆ ಹೇಳಿದ: "ನಿನಗೆ ತುಂಬ ಭಯವಾದರೆ ಕಣ್ಣುಮುಚ್ಚಿಕೊಂಡುಬಿಡು."

ಈ ಸಲಹೆಯಿಂದಲೂ ಆ ಪ್ರಯಾಣಿಕನಿಗೆ ಸಮಾಧಾನವಾಗಲಿಲ್ಲ. ಸ್ವಲ್ಪ ಹೊತ್ತಿನನಂತರ ಡ್ರೈವರ್ ಅವನಲ್ಲಿ ಭರವಸೆ ಮೂಡಿಸಲು ಹೇಳಿದ: "ನಾನೂ ಭಯವಾದಾಗ ಕಣ್ಣುಮುಚ್ಚಿಕೊಂಡು ಬಿಡುತ್ತೇನೆ." *